# ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳ ಹಾನಿ ತಡೆಗಟ್ಟಿ ಲಾಭ ಪಡೆಯಿರಿ !

## ವಿಷಯಸೂಚಿ


卐 ಮನೋಗತ ೫

卐 ಸಂಕಲನಕಾರರ ಪರಿಚಯ ೮

卐 ಅಧ್ಯಾಯ ೧ : ವಿದ್ಯಾರ್ಥಿಗಳಿಗೆ ಕಿವಿಮಾತು ! ೧೧

卐 ಸೂಕ್ಷ್ಮ ಜಗತ್ತಿನ 'ಓರ್ವ ವಿದ್ವಾಂಸ'ರು ಮಾಡಿದ ಟಿಪ್ಪಣಿ ೬೦

卐 ಅಧ್ಯಾಯ ೨ : ಪಾಲಕರಿಗೆ ಮತ್ತು ಶಿಕ್ಷಕಬಂಧುಗಳಿಗೆ ಆಹ್ವಾನ ! ೬೫


## ಮನೋಗತ

ಸ್ವಾತಂತ್ರ್ಯಪೂರ್ವ ಕಾಲದಲ್ಲಿನ ಒಂದು ಘಟನೆ. ಲೋ. ತಿಲಕರ 'ಕೇಸರಿ' ವಾರ್ತಾಪತ್ರಿಕೆಯಲ್ಲಿ, 'ಆದಿಕ್ರಾಂತಿಕಾರಿಗಳಾದ ವಾಸುದೇವ ಬಳವಂತ ಫಡಕೆಯವರಿಗೆ ಆಂಗ್ಲ ಸರಕಾರವು ಕಾರಾಗೃಹದಲ್ಲಿ ಎಷ್ಟು ಯಾತನೆ ನೀಡಿತೆಂದರೆ, ಅವರ ಜೀವನವೇ ಮುಗಿಯಿತು !' ಎಂಬ ವಾರ್ತೆ ಪ್ರಕಟವಾಗಿತ್ತು. ದಾಮೋದರ, ಬಾಲಕೃಷ್ಣ ಮತ್ತು ವಾಸುದೇವ ಚಾಪೇಕರ ಎಂಬ ಮಕ್ಕಳು ಆ ವಾರ್ತೆಯನ್ನು ಓದಿದರು. ಅವರು 'ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಆಂಗ್ಲರ ವಿರುದ್ಧ ಹೋರಾಡಲು ನಿಶ್ಚಯಿಸಿದರು ಮತ್ತು ಅವರು ಅದರಂತೆ ಮಾಡಿಯೂ ತೋರಿಸಿದರು. ಆ ಕಾಲದಲ್ಲಿ ವಾರ್ತಾಪತ್ರಿಕೆಯೇ ಪ್ರಸಾರದ ಮಾಧ್ಯಮವಾಗಿತ್ತು. ಈಗ ವಾರ್ತಾಪತ್ರಿಕೆಗಳೊಂದಿಗೆ ದೂರದರ್ಶನವೂ ಒಂದು ಪ್ರಮುಖ ಪ್ರಸಾರ ಮಾಧ್ಯಮವಾಗಿದೆ. ಪ್ರಸಾರಮಾಧ್ಯಮವು ಮಾನವೀ ಮನಸ್ಸನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ವಾರ್ತಾಪತ್ರಿಕೆಯಲ್ಲಿನ ಒಂದು ವಾರ್ತೆಯನ್ನು ಓದಿ ಈ ಮೂರು ಮಂದಿ ಬಾಲಕರು ಕ್ರಾಂತಿಕಾರರಾಗುತ್ತಾರೆಂದರೆ, ಇಂದು ಪ್ರತಿದಿನ ಯಾವ ಮಕ್ಕಳು ದೂರದರ್ಶನದಲ್ಲಿನ ಪ್ರೇಮಕಥೆಗಳು, ಬಲಾತ್ಕಾರ, ಅಶ್ಲೀಲ ದೃಶ್ಯ ಮತ್ತು ಹಿಂಸಾಚಾರವನ್ನು ನೋಡುತ್ತಾರೆಯೋ, ಅವರು ಮುಂದೆ ಏನಾಗಬಹುದು ?

ದೂರದರ್ಶನದಿಂದ ಮಕ್ಕಳ ಮೇಲೆ ಚಲನಚಿತ್ರ ಕಲಾವಿದರ, ಕ್ರಿಕೆಟ್ ಆಟಗಾರರಂತಹ ತಪ್ಪು ಆದರ್ಶಗಳು ನಿರ್ಮಾಣವಾಗುತ್ತಿವೆ ಮತ್ತು ಸಮರ್ಥ ರಾಮದಾಸಸ್ವಾಮಿಗಳು, ಸ್ವಾಮೀ ವಿವೇಕಾನಂದರು ಮುಂತಾದ ಧರ್ಮಪುರುಷರ ಕಡೆಗೆ ಹಾಗೂ ಛತ್ರಪತಿ ಶಿವಾಜಿ ಮಹಾರಾಜರು, ಲೋ. ತಿಲಕರು ಮುಂತಾದ ರಾಷ್ಟ್ರಪುರುಷರಂತಹ ಆದರ್ಶಗಳ ಕಡೆಗೆ ಮಕ್ಕಳ ನಿರ್ಲಕ್ಷ್ಯವಾಗುತ್ತಿದೆ.

ದೂರದರ್ಶನವು ಮನರಂಜನೆಯ ಸಾಧನವಾಗದೇ, ಸಮಾಜದ ನೀತಿವಂತಿಕೆ, ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರೀಯ ಆದರ್ಶಗಳನ್ನು ನಾಶಗೊಳಿಸುವ ಸಾಧನವಾಗಿ ಬಿಟ್ಟಿದೆ !

ಇಂದು 'ಮೊಬೈಲ್'ನ್ನು 'ಆವಶ್ಯಕತೆ' ಎಂದು ಉಪಯೋಗಿಸುವುದಕ್ಕಿಂತ 'ಫ್ಯಾಶನ್' ಎಂದು ಹೆಚ್ಚು ಉಪಯೋಗಿಸಲಾಗುತ್ತದೆ ! ಇನ್ನೊಬ್ಬರಲ್ಲಿ 'ಟಚ್ ಸ್ಕ್ರೀನ್' ಮೊಬೈಲನ್ನು ನೋಡಿದ ಕೂಡಲೇ ಮಕ್ಕಳಿಗೆ ತಮ್ಮಲ್ಲಿಯೂ 'ಟಚ್ ಸ್ಕ್ರೀನ್' ಮೊಬೈಲ್ ಇರಬೇಕು ಎಂದೆನಿಸುತ್ತದೆ ! ಮದ್ಯ ಮತ್ತು ಸಿಗರೇಟ್‌ಗಳು ವ್ಯಸನಗಳಾಗಿವೆ; ಏಕೆಂದರೆ ಅವು ಶರೀರಕ್ಕೆ ಘಾತಕವಾಗಿವೆ. 'ಇಂಟರ್‌ನೆಟ್' ನಿಂದ ಅಶ್ಲೀಲ ಛಾಯಾಚಿತ್ರಗಳನ್ನು 'ಡೌನ್‌ಲೋಡ್' ಮಾಡುವ ಮತ್ತು ಗಣಕಯಂತ್ರದಲ್ಲಿ ಗಂಟೆಗಟ್ಟಲೆ ಕುಳಿತು 'ಟೆರರ್ ಗೇಮ್ಸ್' ಆಡುವ ಮಕ್ಕಳು ನೀತಿಭ್ರಷ್ಟರಾಗುತ್ತಾರೆ, ಅವರ ಮನೋವೃತ್ತಿ ವಿಧ್ವಂಸಕವಾಗುತ್ತದೆ ಮತ್ತು ವಿಚಾರಕ್ಷಮತೆಯು ಕುಂಠಿತಗೊಳ್ಳುತ್ತದೆ. ಹಾಗಾದರೆ ಇಂಟರ್‌ನೆಟ್ ಮತ್ತು ವೀಡಿಯೋ ಗೇಮ್ಸ್‌ಗಳೂ ಕೂಡ ಮನೋಘಾತಕ ವ್ಯಸನಗಳಲ್ಲವೇ ?

ಮಕ್ಕಳೇ, ಆಧುನಿಕ ವಿಜ್ಞಾನವು ದೂರದರ್ಶನ, ವೀಡಿಯೋ ಗೇಮ್ಸ್ ಮುಂತಾದವುಗಳನ್ನು ಸುಖಪ್ರಾಪ್ತಿಗಾಗಿ ಕಂಡು ಹಿಡಿಯಿತು. ನಮ್ಮ ಪ್ರಾಚೀನ ಋಷಿಮುನಿಗಳೂ ವೈಜ್ಞಾನಿಕರಾಗಿದ್ದರು. ಗುರುತ್ವಾಕರ್ಷಣೆಯ ಸಿದ್ಧಾಂತ, ಆಕಾಶಯಾನ (ವಿಮಾನ), ಶರೀರದ ಮೇಲಿನ ಶಸ್ತ್ರಕ್ರಿಯೆ ಮುಂತಾದವುಗಳನ್ನು ಪಾಶ್ಚಾತ್ಯ ವಿಜ್ಞಾನಿಗಳಿಗಿಂತ ನೂರಾರು ವರ್ಷಗಳ ಹಿಂದೆಯೇ ನಮ್ಮ ಋಷಿಮುನಿಗಳು ಕಂಡು ಹಿಡಿದಿದ್ದಾರೆ. ಅವರು ವಿಜ್ಞಾನವನ್ನು ಮಾನವನ ಹಿತಕ್ಕಾಗಿ ಉಪಯೋಗಿಸಿದರು. ಅವರು ಮೋಹಿತರಾಗಿ ತಾತ್ಕಾಲಿಕ ಸುಖದ ಹಿಂದೆ ಹೋಗಲು ಕಲಿಸದೇ, ಸತತವಾಗಿ ಉಳಿಯುವ ಆನಂದ ಮತ್ತು ಮನಃಶಾಂತಿಯನ್ನು ಕಂಡು ಹಿಡಿಯಲು ಕಲಿಸಿದರು. ಮಕ್ಕಳೇ, ಆದುದರಿಂದ ದೂರದರ್ಶನ, ಇಂಟರ್‌ನೆಟ್, ವೀಡಿಯೋ ಗೇಮ್ಸ್ ಮುಂತಾದವುಗಳನ್ನು ತಾತ್ಕಾಲಿಕ ಸುಖ ಪಡೆಯಲು ಉಪಯೋಗಿಸಬೇಡಿರಿ; ಏಕೆಂದರೆ ಅವುಗಳ ಮೋಹಜಾಲದಲ್ಲಿ ನೀವು ಸಿಲುಕಿಕೊಳ್ಳುತ್ತಾ ಹೋಗುವಿರಿ ಮತ್ತು ಜೀವನದ ಅತ್ಯಮೂಲ್ಯ ಸಮಯ ಮತ್ತು ಹಣವನ್ನೂ ಕಳೆದುಕೊಳ್ಳುವಿರಿ ! ಹೀಗಾಗಬಾರದೆಂದೇ ಈ ಗ್ರಂಥದಲ್ಲಿ ದೂರದರ್ಶನ, ಇಂಟರ್‌ನೆಟ್, ವೀಡಿಯೋ ಗೇಮ್ಸ್ ಮುಂತಾದವುಗಳಿಂದಾಗುವ ಶಾರೀರಿಕ, ಮಾನಸಿಕ, ರಾಷ್ಟ್ರೀಯ, ಸಾಂಸ್ಕೃತಿಕ ಮುಂತಾದ ವಿವಿಧ ಸ್ತರಗಳಲ್ಲಿನ ಹಾನಿಗಳನ್ನು ಹೇಳಲಾಗಿದೆ.

卐 ——— 卐

ಸ್ವಾಮಿ ವಿವೇಕಾನಂದರು, ‘ಜೀವನದಲ್ಲಿ ವಿಜ್ಞಾನ ಮತ್ತು ಧರ್ಮ ಇವುಗಳ ಯೋಗ್ಯ ಜೊತೆ ನೀಡುವುದು ಮಹತ್ವದ್ದಾಗಿದೆ’ ಎಂದು ಹೇಳುತ್ತಿದ್ದರು. ನಿಜವಾದ ಆನಂದವು ಸುಖದ ಸಾಧನಗಳನ್ನು ಭೋಗಿಸುವುದರಿಂದ ಸಿಗದೇ ಧರ್ಮಪಾಲನೆಯಿಂದ ಸಿಗುತ್ತದೆ. ಆದುದರಿಂದ ಧರ್ಮಪಾಲನೆ ಮತ್ತು ಧರ್ಮಕಾರ್ಯಗಳ ಸದುದ್ದೇಶದಿಂದ ವಿಜ್ಞಾನವನ್ನು ಉಪಯೋಗಿಸುವುದು ಯೋಗ್ಯವಾಗಿದೆ. ಇದಕ್ಕಾಗಿಯೇ ಈ ಗ್ರಂಥದಲ್ಲಿ ದೂರದರ್ಶನ, ಮೊಬೈಲ್ ಮತ್ತು ಇಂಟರ್‌ನೆಟ್‌ಗಳನ್ನು ಧರ್ಮ, ಹಾಗೆಯೇ ರಾಷ್ಟ್ರ ಕಾರ್ಯಕ್ಕಾಗಿ ಹೇಗೆ ಉಪಯೋಗಿಸಬೇಕು ಎಂಬುದನ್ನು ಹೇಳಲಾಗಿದೆ.

ಪಾಲಕರೇ ಮಕ್ಕಳ ಮೊದಲ ‘ಶಿಕ್ಷಕ’ರಾಗಿರುತ್ತಾರೆ. ಇಂದು ಪಾಲಕರೇ ಮನೆಯಲ್ಲಿ ಕೇಬಲ್‌ಸಂಪರ್ಕ ಮಾಡಿಸುತ್ತಾರೆ, ಮಕ್ಕಳು ಹಠ ಮಾಡಿದಾಗ ಅವರಿಗೆ ಮೊಬೈಲ್ ಮತ್ತು ವೀಡಿಯೋ ಗೇಮ್ಸ್ ಕೊಡಿಸುತ್ತಾರೆ ! ನಂತರ ದೂರದರ್ಶನ ಮತ್ತು ಇಂಟರ್‌ನೆಟ್‌ಗಳಿಂದ ಮಕ್ಕಳು ಕೆಟ್ಟರೆ ಅದರಲ್ಲಿ ಪಾಲಕರದ್ದೂ ಅಷ್ಟೇ ತಪ್ಪಿದೆ ಎಂಬುದನ್ನು ಪಾಲಕರು ಗಮನದಲ್ಲಿಟ್ಟುಕೊಳ್ಳಬೇಕು. ಇದು ಮಕ್ಕಳ ಉಜ್ವಲ ಭವಿಷ್ಯದ ಕಾಳಜಿಯಿರುವ ಪಾಲಕರೂ ಓದಬೇಕಾದಂತಹ ಗ್ರಂಥವಾಗಿದೆ.

ಈ ಗ್ರಂಥವನ್ನು ಓದಿ ದೂರದರ್ಶನ, ಇಂಟರ್‌ನೆಟ್ ಇತ್ಯಾದಿಗಳನ್ನು ಮಕ್ಕಳು ರಾಷ್ಟ್ರಸೇವೆ ಮತ್ತು ಧರ್ಮಸೇವೆಗಳಿಗಾಗಿ ಉಪಯೋಗಿಸಿದರೆ ಈ ಗ್ರಂಥವನ್ನು ನಿರ್ಮಿಸಿದ ಉದ್ದೇಶವು ಸಾರ್ಥಕವಾಗುತ್ತದೆ. ಇಂತಹ ಸದ್ಬುದ್ಧಿ ಮಕ್ಕಳಲ್ಲಿ ಬರಲಿ, ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

卐 ——— 卐

‘ಸನಾತನ ಸಂಸ್ಥೆ’ಯು ಮಾತೃಭಾಷಾಭಿಮಾನಿಯಾಗಿದೆ. ‘ಮಾತೃಭಾಷೆಯ ರಕ್ಷಣೆ ಮತ್ತು ಭಾಷಾಶುದ್ಧಿ ಚಳುವಳಿ’ಯನ್ನು ನಡೆಸಲು ಸನಾತನವು ಗ್ರಂಥಮಾಲಿಕೆಯನ್ನೂ ನಿರ್ಮಿಸಿದೆ. ಹೀಗಿರುವಾಗಲೂ ಗ್ರಂಥದ ಶೀರ್ಷಿಕೆಯಲ್ಲಿ, ಹಾಗೆಯೇ ಗ್ರಂಥದಲ್ಲಿ ಕೆಲವು ಆಂಗ್ಲ ಶಬ್ದಗಳನ್ನು ಹಾಗೆಯೇ ಇಡಲಾಗಿವೆ; ಏಕೆಂದರೆ ವ್ಯವಹಾರದಲ್ಲಿ ಅವು ಹಾಗೆಯೇ ಪ್ರಚಲಿತವಾಗಿವೆ. ಈ ಶಬ್ದಗಳಿಗೆ ಕನ್ನಡ ಪ್ರತಿಶಬ್ದಗಳನ್ನು ಉಪಯೋಗಿಸಿದರೆ ಅವು ಮಕ್ಕಳಿಗೆ ಕಠಿಣವೆನಿಸಬಹುದು ಮತ್ತು ಇದರಿಂದ ವಿಷಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿನ ಅವರ ಸ್ವಾರಸ್ಯ ಕಡಿಮೆಯಾಗಬಹುದು. ಇದೇ ಇದರ ಹಿಂದಿನ ಏಕೈಕ ಉದ್ದೇಶವಾಗಿದೆ. ಕೆಲವು ಸಮಯದ ನಂತರ ಈ ಆಂಗ್ಲ ಶಬ್ದಗಳ ಬದಲು ಸ್ವಕೀಯ ಶಬ್ದಗಳನ್ನೇ ಉಪಯೋಗಿಸಲಾಗುವುದು.

# ಅಧ್ಯಾಯ ೧ : ವಿದ್ಯಾರ್ಥಿಗಳಿಗೆ ಕಿವಿಮಾತು !

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ದೂರದರ್ಶನ (ಟಿ.ವಿ.)** ೧೧

೧ ಅ. 'ದೂರದರ್ಶನ' ನಿಮ್ಮ ಮಿತ್ರವೋ ಅಥವಾ ಶತ್ರುವೋ ? ೧೧

೧ ಆ. 'ದೂರದರ್ಶನ'ವು ನಿಮ್ಮ 'ಶತ್ರು'ವಾಗುವಂತಹ ಕಾರ್ಯಕ್ರಮಗಳನ್ನು ನೋಡಬೇಡಿರಿ ! ೧೧

೧ ಆ ೧. 'ಕಾರ್ಟೂನ್' ೧೧

೧ ಆ ೨. ಕಾಲ್ಪನಿಕ ಪಾತ್ರಗಳ ಸಂದರ್ಭದಲ್ಲಿನ ಧಾರಾವಾಹಿಗಳು ೧೩

೧ ಆ ೩. ತಪ್ಪು ಸಂಸ್ಕಾರಗಳನ್ನು ಮಾಡುವ ಕೆಲವು ಕೌಟುಂಬಿಕ ಧಾರವಾಹಿಗಳು ೧೩

೧ ಆ ೪. ನಿರರ್ಥಕ, ಸಂಸ್ಕೃತಿಹೀನ ಮತ್ತು ಅಶ್ಲೀಲ ಚಲನಚಿತ್ರಗಳು ೧೫

೧ ಆ ೫. ನಿರರ್ಥಕ ಮತ್ತು ಬಹಳಷ್ಟು ಸಮಯವನ್ನು ವ್ಯರ್ಥಗೊಳಿಸುವ ಆಟಗಳು ೧೬

೧ ಇ. ದೂರದರ್ಶನದಲ್ಲಿ ತೋರಿಸಲಾಗುವ ಕೆಲವು ಜಾಹೀರಾತುಗಳಿಂದಲೂ ಜಾಗರೂಕರಾಗಿರಿ ! ೧೮

೧ ಈ. ದೂರದರ್ಶನಕ್ಕೆ ಬಲಿಯಾಗುವುದರಿಂದಾಗುವ ಸಾಮಾನ್ಯ ಹಾನಿಗಳು ೨೧

* ಶಾರೀರಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಾನಿಗಳು ೨೨

೧ ಉ. ದೂರದರ್ಶನದಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮಗಳ ಪ್ರಮಾಣ ೨೪

೧ ಊ. ಅನಾವಶ್ಯಕ ದೂರದರ್ಶನ ನೋಡುವ ಅಭ್ಯಾಸವನ್ನು ಹೇಗೆ ನಿಲ್ಲಿಸಬೇಕು ? ೨೪

೧ ಎ. ದೂರದರ್ಶನವನ್ನು ಹಿತಕರವಾಗಿ ಹೇಗೆ ಉಪಯೋಗಿಸಬೇಕು ? ೨೬

೧ ಏ. ದೂರದರ್ಶನದಲ್ಲಿನ ಕಾರ್ಯಕ್ರಮಗಳನ್ನು ನೋಡುವಾಗ ಯಾವ ಕಾಳಜಿ ವಹಿಸಬೇಕು ? ೨೮

**೨. ಸಂಚಾರಿವಾಣಿ (ಮೊಬೈಲ್)** ೨೯

೨ ಅ. ಮೊಬೈಲ್‌ನ್ನು 'ಫ್ಯಾಶನ್' / ವಿಲಾಸೀ ಸಾಧನವೆಂದು ನೋಡಬೇಡಿ ! ೨೯

೨ ಆ. ಮಕ್ಕಳು ಸಂಚಾರಿವಾಣಿಯನ್ನು ಹೇಗೆ ದುರುಪಯೋಗಿಸುತ್ತಾರೆ ? ೩೦

೨ ಇ. ಮಕ್ಕಳೇ, ಸಂಚಾರಿವಾಣಿಯ ಸದುಪಯೋಗವನ್ನು ಹೇಗೆ ಮಾಡಬೇಕು ? ೩೧

೨ ಈ. ಸಂಚಾರಿವಾಣಿಯ ಸಂದರ್ಭದಲ್ಲಿ ಯಾವ ಕಾಳಜಿ ತೆಗೆದುಕೊಳ್ಳಬೇಕು ? ೩೨

೨ ಉ. ಸಂಚಾರಿವಾಣಿಯ ಕರೆಧ್ವನಿ (ರಿಂಗ್‌ಟೋನ್) ಸಾತ್ತ್ವಿಕವಿರಲಿ ! ೩೪

**೩. ಅಂತರ್ಜಾಲ (ಇಂಟರ್‌ನೆಟ್) ೩೪**

೩ ಅ. ಅಂತರ್ಜಾಲವನ್ನು ಹೇಗೆ ಉಪಯೋಗಿಸುತ್ತಾರೆ ? ೩೪

೩ ಆ. ಇಂಟರ್‌ನೆಟ್ ಎಂದರೆ ಆಧುನಿಕ ಪೀಳಿಗೆಗೆ ಅಂಟಿಕೊಂಡ ಒಂದು ವ್ಯಸನ ! ೩೫

೩ ಇ. ಇಂಟರ್‌ನೆಟ್‌ಗೆ ತುತ್ತಾಗುವುದರಿಂದ ಆಗುವ ಹಾನಿಗಳು ೩೮

೩ ಈ. ಇಂಟರ್‌ನೆಟ್‌ನಿಂದ ನಿರ್ಮಾಣವಾಗುವ ಅಪಾಯಗಳು ೩೯

೩ ಉ. ಇಂಟರ್‌ನೆಟ್‌ನ್ನು ಉಪಯೋಗಿಸುವಾಗ ಯಾವ ಕಾಳಜಿ ವಹಿಸಬೇಕು ? ೪೦

೩ ಊ. ಅನಾವಶ್ಯಕ ಇಂಟರ್‌ನೆಟ್‌ನ್ನು ನೋಡುವ ಅಭ್ಯಾಸವನ್ನು ಹೇಗೆ ನಿಲ್ಲಿಸಬೇಕು ? ೪೧

೩ ಎ. ಇಂಟರ್‌ನೆಟ್‌ನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರ ಮತ್ತು ಧರ್ಮ ಪ್ರೇಮಿಗಳಾಗಿರಿ ! ೪೧

**೪. ವೀಡಿಯೋ ಗೇಮ್ಸ್ ೪೫**

೪ ಅ. ವಿಧಗಳು ೪೫

೪ ಆ. ಟೆರರ್ ಗೇಮ್ಸ್ ೪೫

೪ ಇ. ಎಲ್ಲ ವೀಡಿಯೋ ಗೇಮ್ಸ್‌ಗಳಿಂದಾಗುವ ಕೆಲವು ಹಾನಿಗಳು ೪೭

೪ ಈ. ವೀಡಿಯೋ ಗೇಮ್ಸ್‌ಗಳ ಅಭ್ಯಾಸ ನಿಲ್ಲಿಸಲು ಏನು ಮಾಡಬೇಕು ? ೪೮

**೫. ಕುಸಂಸ್ಕಾರಗಳಿಂದ ಬಿಡುಗಡೆಯಾಗಲು ಮತ್ತು ಜೀವನವನ್ನು ಆನಂದಮಯಗೊಳಿಸಲು ಈ ಉಪಾಯಗಳನ್ನೂ ಮಾಡಿರಿ ! ೪೯**

೫ ಅ. ಮನಸ್ಸಿಗೆ ಸ್ವಯಂಸೂಚನೆಗಳನ್ನು ನೀಡಿರಿ ! ೪೯

೫ ಆ. 'ಸಾಧನೆ'ಯ ಆಸಕ್ತಿಯನ್ನು ಬೆಳೆಸಿಕೊಳ್ಳಿರಿ ! ೫೩

**೬. ಮಕ್ಕಳೇ, ಈ ಗ್ರಂಥದಲ್ಲಿರುವ ಜ್ಞಾನವನ್ನು ಇತರರಿಗೆ ತಲುಪಿಸಿರಿ ! ೫೮**

## ಅಧ್ಯಾಯ ೨ : ಪಾಲಕರಿಗೆ ಮತ್ತು ಶಿಕ್ಷಕಬಂಧುಗಳಿಗೆ ಆಹ್ವಾನ !

### ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ಆಧುನಿಕ ಪ್ರಸಾರಮಾಧ್ಯಮಗಳಿಂದ ಈಗ ನಿರ್ಮಾಣವಾಗಿರುವ ರಾಷ್ಟ್ರದ ಭಯಾನಕ ಸ್ಥಿತಿ ೬೬

೨. ದೇಶದ ಭಾವೀ ಪೀಳಿಗೆಯನ್ನು ರೂಪಿಸುವ ಸಾಮರ್ಥ್ಯ ಪಾಲಕರಲ್ಲಿ ಮತ್ತು ಶಿಕ್ಷಕರಲ್ಲಿದೆ ! ೬೮

೩. ಪಾಲಕರ ಜವಾಬ್ದಾರಿ ೬೮

೩ ಅ. ಕೆಲವು ಪಾಲಕರ ಅಯೋಗ್ಯ ಮಾನಸಿಕತೆ ೬೮

೩ ಆ. ದೂರದರ್ಶನದ ಸಂದರ್ಭದಲ್ಲಿ ಏನು ಮಾಡಬೇಕು ಮತ್ತು ಏನು ಮಾಡಬಾರದು ? ೭೦

೩ ಇ. ಇಂಟರ್‌ನೆಟ್‌ನ ದುಷ್ಪರಿಣಾಮಗಳನ್ನು ತಡೆಗಟ್ಟಲು ಏನು ಮಾಡಬೇಕು ? ೭೬

೩ ಈ. ಪಾಲಕರು ಮಾಡಬೇಕಾದ ಕೆಲವು ಇತರ ಕೃತಿಗಳು ೭೭

* ಮಕ್ಕಳಿಗಾಗಿ ಸಮಯ ಕೊಡಿರಿ ! ೭೮

* ಪಾಲಕರೇ, ಮಕ್ಕಳಿಗೆ ನಕಾರ ಸ್ವೀಕರಿಸುವ ಅಭ್ಯಾಸವನ್ನೂ ಮಾಡಿಸಿ ! ೭೮

* ಮಕ್ಕಳ ಮೇಲೆ ಸುಸಂಸ್ಕಾರ ಮಾಡಿರಿ ! ೮೦

೩ ಉ. 'ಸಾಧನೆಯನ್ನು ಮಾಡುವುದೇ' ಎಲ್ಲ ಸಮಸ್ಯೆಗಳಿಗೆ ಉತ್ತರವಾಗಿದೆ ! ೮೩

೪. ಶಿಕ್ಷಕರ ಜವಾಬ್ದಾರಿ ೮೪

* 'ಬಿಡುವಿನ ಸಮಯದಲ್ಲಿ' ತರಗತಿಯಲ್ಲಿ ದೂರದರ್ಶನ, ಸಂಚಾರಿವಾಣಿ, ಇಂಟರ್‌ನೆಟ್ ಮುಂತಾದವುಗಳ ಲಾಭ ಮತ್ತು ಹಾನಿಗಳ ಬಗ್ಗೆ ಚರ್ಚೆಯನ್ನು ಮಾಡಿರಿ ! ೮೪

* ವಾರದಲ್ಲಿ ತರಗತಿಯಲ್ಲಿ ಒಂದು ಗಂಟೆಯನ್ನು 'ಧರ್ಮಶಿಕ್ಷಣ' ಅಥವಾ 'ಸಾಧನೆ'ಯ ಬಗ್ಗೆ ಮಾರ್ಗದರ್ಶನ ಮಾಡುವ ಕಾರ್ಯಕ್ರಮವನ್ನು ಆಯೋಜಿಸಿರಿ ! ೮೫


---

**ಟಿಪ್ಪಣಿ :** ಗ್ರಂಥದಲ್ಲಿನ ಸೂಕ್ಷ್ಮಜ್ಞಾನದ ಚಿತ್ರದಲ್ಲಿ ತೋರಿಸಿರುವ ವಿವಿಧ ಸ್ಪಂದನಗಳಿಂದಾಗಿ ಅದರ ಮೂಲ ರೇಖಾಚಿತ್ರವು ಸುಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಂತಹ ಮೂಲ ರೇಖಾಚಿತ್ರವನ್ನು ಸಂಬಂಧಪಟ್ಟ ಸೂಕ್ಷ್ಮಜ್ಞಾನದ ಚಿತ್ರದ ಬದಿಯಲ್ಲಿ ಕೊಡಲಾಗಿದೆ.